ಡಿ.ಹೆಚ್.ಎಂ.ವಿ.ಎಸ್. ಸ್ವಾಮಿ, ಊರಿಲ್ಲ

ರೇಷ್ಮೆಹುಳುವಿನ ಸಾವು ಸ್ವಾಭಾವಿಕ ಸಾವೋ, ಆತ್ಮಹತ್ಯೆಯೋ?



ಎರಡೂ ಅಲ್ಲ; ಆಸ್ತಿಗಾಗಿ ಮಾಡಿದ ಕಗ್ಗೊಲೆ.

ಎನ್. ವೈದೇಹಿ, ಮೈಸೂರು

ಪ್ರಾಣಿಗಳ ಮುಖ್ಯ ಅಂಗಗಳನ್ನು ಮಾನವನಿಗೆ ಜೋಡಿಸುವಂತಿದ್ದರೆ ಪ್ರಾಣಿಗಳ ಪರಿಸ್ಥಿತಿ ಏನಾಗುತ್ತಿತ್ತು?

ಜೋಡಿಸುವ ಅಗತ್ಯವಿಲ್ಲ; ಹಾಗೆಯೇ ಇವೆ ಕಾಗೆಕಣ್ಣು, ಗೂಬೆಕಣ್ಣು, ನಾಯಿಬುದ್ಧಿ, ನರಿಬುದ್ಧಿ...

ವಿ.ಎಸ್. ರಾಮಮೂರ್ತಿ, ಕಂದವಾರ

ಖಾಸಗಿ ಟಿವಿ ಚಾನೆಲ್‌ಗಳಲ್ಲಿ ಸುದ್ದಿಗಳನ್ನು ಕೇಳುವುದನ್ನು ನಿಲ್ಲಿಸಿದ ಮೇಲೆ ಆರೋಗ್ಯ ಸುಧಾರಿಸುತ್ತಿದೆ...?

ಹಾಳು ಸೀರಿಯಲ್ ವೀಕ್ಷಣೆಯೂ ನಿಂತರೆ ಹ್ಯಾಪ್‌ಮೋರೆ ಹ್ಯಾಪಿ ಮೋರೆ ಆಗುತ್ತದೆ.

ಬಿಂದುಶ್ರೀ ಕೆ.ಎಸ್. ಗೌರಿಬಿದನೂರು

ಭಕ್ತಿಗೂ, ಸೌಂದರ್ಯಕ್ಕೂ ಇರುವ ವ್ಯತ್ಯಾಸ ಏನು?



ಭಕ್ತಿಯಲ್ಲಿ ಶಕ್ತಿ ಕಾಣುತ್ತೇವೆ; ಸೌಂದರ್ಯದಲ್ಲಿ ರಕ್ತಿ.

ಟಿ.ಕೆ. ಮೂರ್ತಿ, ಉಜಿರೆ

ನಾವು ಕೇಳುವ ಪ್ರಶ್ನೆ ಕಷ್ಟವಾಗಿದ್ದರೆ ಏನು ಮಾಡುತ್ತೀರಿ?

ಸಂತೋಷಿಸುತ್ತೇನೆ. ಸವಾಲಾಗುವುದೇ ಒಳ್ಳೆಯ ಸವಾಲಿನ ಲಕ್ಷಣ.

ವಿ. ಹಮೀದ್, ವಿಟ್ಲ

ಎಲ್ಲಾ ವಿಷಯದಲ್ಲಿಯೂ ಗಲಾಟೆ ಮಾಡುವ ಹೆಣ್ಣಿಗೆ ನಿಮ್ಮ ಕಿವಿಮಾತೇನು?

ಬ್ರೇಕಿಂಗ್ ನ್ಯೂಸ್ ಚಾನಲ್‌ನ ಪ್ಯಾನಲ್ ಎಕ್ಸ್‌ಪರ್ಟ್ ಆಗಿ; ಯಶ ಖಚಿತ.

ನಾಗೇಶ ಮೈಸೂರು, ಸಿಂಗಾಪುರ

ಈ ಕೊರೊನಾ ಕಾಲದಲ್ಲೂ ನಿಮ್ಮ ಉತ್ತರಗಳೇಕೆ ಇನ್ನೂ ವೈರಲ್ ಆಗುತ್ತಿಲ್ಲ ಸಾರ್?

ಓದಿದವರು ಅದನ್ನು ಉತ್ತರೋತ್ತರವಾಗಿ (ಫಾರ್ವರ್ಡ್) ಕಳುಹಿಸುತ್ತಿಲ್ಲವಲ್ಲ.

ಹೆಚ್.ವೈ. ಲಲಿತ, ಬೆಂಗಳೂರು

ಹಿರಿಯರು ಮಾಸ್ಕ್ ಹಾಕಿ ಬದುಕಬೇಡ ಎನ್ನುತ್ತಿದ್ದರು. ಸರ್ಕಾರ ಮಾಸ್ಕ್ ಕಡ್ಡಾಯ ಮಾಡಿದೆ. ಏನೀ ವಿಪರ್ಯಾಸ?

ವಿಪರ್ಯಾಸವೇನಿಲ್ಲ; ಅಂದು ವಿಶ್ವಾಸ ಕೆಡದಿರಲು ಅದು ಸರಿ; ಇಂದು ಶ್ವಾಸ ಕೆಡದಿರಲು ಇದು ಸರಿ.

ವಿ. ಹೇಮಂತಕುಮಾರ್, ಬೆಂಗಳೂರು

ವಿಮಾನದಲ್ಲಿ ಹಾರ್ನ್ ಏಕೆ ಇರುವುದಿಲ್ಲ?

ಎಂಜಿನ್ ಸೌಂಡ್ ಜಾಸ್ತಿ ಇರೋ ವೆಹಿಕಲ್‌ಗೆ ಹಾರ್ನ್ ವೇಸ್ಟೂಂತ.

ಅನಸೂಯ ಟಿ. ಕೇದಿಗೆಮನೆ

ಸಚಿವರಾಗುವ ಅರ್ಹತೆಗೆ ಎಂಟ್ರೆನ್ಸ್ ಎಕ್ಸಾಮ್ ಇಟ್ಟರೆ ಹೇಗೆ?

ಫ್ರಂಟ್ ಎಂಟ್ರೆನ್ಸ್ ನಲ್ಲಿ ಫೇಲ್ ಆದರೂ ಬ್ಯಾಕ್ ಎಂಟ್ರೆನ್ಸ್ ಮೂಲಕ ಪಾಸ್ ಆಗಿಬಿಡುತ್ತಾರೆ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಸತಿ ತನ್ನ ಹೆಸರಿನ ಮುಂದೆ ಪತಿಯ ಹೆಸರು ಸೇರಿಸಿಕೊಳ್ಳುವಂತೆ ಪತಿ ಏಕೆ ಸೇರಿಸಿಕೊಳ್ಳುವುದಿಲ್ಲ?

ಸೆಕ್ಯುರಿಟಿ ಕ್ಯಾಬಿನ್ ಮನೆಯ ಮುಂದಿರಬೇಕು; ಮನೆಯೇ ಸೆಕ್ಯುರಿಟಿ ಕ್ಯಾಬಿನ್ ಮುಂದಿರುವಂತಿಲ್ಲ.

ಗಡಿಯಾರದ ಸುಬ್ರಹ್ಮಣ್ಯ, ಬೆಂಗಳೂರು

ವಾರ್ಷಿಕ ಪರೀಕ್ಷೆಗಳಲ್ಲಿ ಪ್ರತಿಬಾರಿ ಹುಡುಗಿಯರದೇ ಮೊದಲ ಸ್ಥಾನ. ಕಾರಣವೇನು?

ಬಾಲಕರು ಹಿಂಬಾಲಕರಾಗುವುದರಲ್ಲೇ ಹೆಚ್ಚು ಸಮಯ ಕಳೆಯುವುದರಿಂದ.

ಪತ್ತಂಗಿ ಮುರಳಿ, ಬೆಂಗಳೂರು

ಸಿನಿಮಾಗೂ, ನಿಜ ಜೀವನಕ್ಕೂ ಇರುವ ವ್ಯತ್ಯಾಸವೇನು?

ಅಲ್ಲಿ ಮೊದಲು ಟಿಕೆಟ್, ನಂತರ ಷೋ; ಇಲ್ಲಿ ಮೊದಲು ಷೋ, ನಂತರ ಟಿಕೆಟ್.

## ಬಹುಮಾನಿತ ಪ್ರಶ್ನೆ

ಗಂಜಾಂ ನಾಗರಾಜ, ಮೈಸೂರು

ದ್ರೌಪದಿಯನ್ನು ದುರ್ಯೋಧನ ಗೆದ್ದಿದ್ದರೆ ಗಾಂಧಾರಿ ಏನೆಂದು ಆಶೀರ್ವದಿಸುತ್ತಿದ್ದಳು?

ದ್ರೋಣರನ್ನು ಹೊರಗಟ್ಟಿ, ದ್ರುಪದ ಪುತ್ರಿಯೊಂದಿಗೆ ಹೊಂದಿಕೊಂಡು ಬಾಳೆಂದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಸತ್ಯ ಎಂಬುದು ಒಂದೇ ಆದರೂ ಬೇರೆಬೇರೆಯಾಗಿ ಕಾಣುವುದೇಕೆ?

ಕೋನಪ್ರಭಾವ; ಮೇಲಿಂದ ಫೋಟೊ ತೆಗೆದಾಗ ಕುಳ್ಳಾಗಿ ಕಾಣುವನೇ ಕಾಲಿನೆಡೆಯಿಂದ ತೆಗೆದಾಗ ಲಂಬೂ.

ಸ್ವಾತಿ ಎಂ.ಎಸ್. ಗೌರಿಬಿದನೂರು

ತಮ್ಮೊಳಗೆ ನಶೆ ಏರಿಸುವ ಕಿಚ್ಚು ಇದ್ದರೂ ಸಿನಿಮಾ ನಟಿಯರಿಗೇಕೆ ಗಾಂಜಾ ಹುಚ್ಚು?

ಕಿಚ್ಚನ್ನು ಮತ್ತಷ್ಟು ಹೆಚ್ಚಿಸುತ್ತದಲ್ಲ; ಪೂರ್ಣಾಹುತಿಯಿಂದಲೇ ಫಲ ಪ್ರಾಪ್ತಿ ಎಂಬುದು ಅವರ ನಂಬಿಕೆ!

ಅಶೋಕ್ ಹಾಲಣ್ಣವರ್, ಲಕ್ಷ್ಮೇಶ್ವರ

ಹಲ್ಲಿ ನುಡಿದಿದ್ದೆಲ್ಲಾ ನಿಜಾನಾ ಸರ್?



ತಿಂಮನ ಜುಟ್ಟಿನಮೇಲೆ ಬಿದ್ದ ಹಲ್ಲಿ ಅಂದೇ ಸತ್ತಿತಂತೆ. ಕೇಶಾಂತೇ ಮೃತ್ಯುಭಯಂ ಹಲ್ಲಿಗೆ ನಿಜವಾಗಿತ್ತು.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಬಾಡಿಹೋದ ಬಳ್ಳಿಯಲ್ಲೂ ಹೂವನ್ನು ಅರಳಿಸುವ ಪ್ರಯತ್ನಕ್ಕೆ ಏನೆಂದು ಕರೆಯಬೇಕು?

ವ್ಯಾಕ್ಸಿನ್ ಬುದ್ಧಿ.

ರಾಜೀವ್ ಕುಮಾರ್, ದಾವಣಗೆರೆ

ಎಲ್ಲಾ ಜೀವಿಗಳಿಗಿಂತ ಮನುಷ್ಯನಿಗೆ ಆಯಸ್ಸು ಹೆಚ್ಚಾಗಿರುವುದು ಏಕೆ?

ಅಂದಚಿಟ್ಟೆಯ ಜೀವನದಿಂದ ಅಂಧ ಬಾವಲಿಯ ಜೀವನದವರೆಗೆ ಎಲ್ಲವನ್ನೂ ಅನುಭವಿಸಲು.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in